

# ಪ್ರಾರ್ಥನೆ

## ಹರಸು ಗುರುವರ ನಿತ್ಯವೂ

ಶ್ರೀವಿವೇಕಾನಂದರನು ಕೈಹಿಡಿದು ಕರೆದು ರೂಪಿಸಿದ ದೇವಶಿಲ್ಪಿ
ಶ್ರೀರಾಮಕೃಷ್ಣ ಗುರುವೆ, ಭಾರತವನು ಬೆಳಗಿ ನಿಂತೆ ಯುಗಧರ್ಮ ಮೆರೆಸಿ.

ನಿನ್ನ ಸ್ಪರ್ಶಕೆ ಓಡಿಹೋಯಿತು, ಹೋಯಿತು ಭ್ರಮೆಯ ಬೇರಿನ ಕತ್ತಲೆ,
ತವ ಹೃನ್ಮಂದಿರ ತೆರೆಯಿತು ಸಕಲ ಜಗಕೆ ನವಶಾಂತಿ ಅಭಿಮತ ವರ್ತನೆ.
ತವ ಪಾದಪದ್ಮದೊಳಲ್ಲೇ ಬಿದ್ದು ಸುಮ್ಮನಿದ್ದವು ಅಷ್ಟಸಿದ್ಧಿಗಳು,
ತವ ತಪದ ವಾರಿಧಿಯಲ್ಲಿ ಅಲ್ಲೇ ತೇಲಿ ಬಂದವು ಸಕಲ ಶಾಸ್ತ್ರಗಳು.

ವಂಗದೇಶದ ದಿವ್ಯಯೋಗಿಯೆ, ಎಂಥ ಗುರುತರ ಆ ಬಾಳ ಸಾಧನೆಯು,
ಯೋಗಿವರ ನಿನ್ನ ಕಂಡೊಡೆ ಓಡಿಹೋಯಿತು ಭೇದಬುದ್ಧಿಯ ಶ್ವಾನವು.
ಹೊನ್ನು ಮಣ್ಣು ನಿನ್ನ ದೃಷ್ಟಿಗೆ ಒಂದೆಯಾದವು, ಅರಿಯಲಿಲ್ಲವೊ ಲೋಕವು,
ಸ್ತ್ರೀಯರನು ಮಾತೃಭಾವದಿ ಕಂಡ ಯೋಗಿಯು, ಶುದ್ಧ ಮಗುವಿನ ಮನಸದು.


ವಿರಳ ಶಿಷ್ಯವೃಂದಕೆ ಅಂದು ಕರೆದೆ, ತೆರೆಯಿತು ನಾಡು ಬೀಡಿನ ಭಾಗ್ಯವು,
ನಿನ್ನ ಪಡೆದ ಭಾರತಮಾತೆ ಧನ್ಯಳು; ವಂಗ ನಾಡ ಕೀರ್ತಿ ಬೆಳಗಿತು.
ಈ ಮನುಜ ಬಾಳ ದೇವಮಾನವ ಹಂತಕೇರಲು ನೀ ಕರೆದಿರುವೆ,
ಶ್ರೀಶಾರದಾಂಬೆಯ ತಪೋಕಾಂತಿಗೆ ನೀಡಿ ಆಸರೆ ಘನತೆ ಮೆರೆದಿರುವೆ.

ತವ ಶುದ್ಧಜೀವನ ಮಹಿಮೆ ಅರಿಯಲು ವಿವೇಕ ದೃಷ್ಟಿಯೊಂದ ಕರುಣಿಸು

ಲೋಕಗುರುವೆ, ತವಪಾದಪದ್ಮಕೆ ನಮನವು; ಹರಸು ಗುರುವರ ನಿತ್ಯವೂ.

—ಎಂ.ಜಿ. ಗಂಗನಪಳ್ಳಿ, ಬೀದರ್.

# ಸೂಕ್ತಿಪ್ರಭ



☛ ಕಾಮ-ಕಾಂಚನ ಇವೇ ಮಾಯೆ. ಮನಸ್ಸನ್ನು ಇವೆರಡೂ ಬಿಟ್ಟು ತೊಲಗಿದವು ಎಂದರೆ ಯೋಗವುಂಟಾಗುತ್ತದೆ. ಆತ್ಮ, ಎಂದರೆ ಪರಮಾತ್ಮ ಸೂಜಿಗಲ್ಲು; ಜೀವಾತ್ಮ ಸೂಜಿ. ಆತ ಎಳೆದುಕೊಂಡರೇ ಯೋಗ. ಆದರೆ ಸೂಜಿಗೆ ಮಣ್ಣು ಮೆತ್ತಿಕೊಂಡಿದ್ದರೆ ಸೂಜಿಗಲ್ಲು ಅದನ್ನು ಎಳೆಯಲಾರದು. ಮಣ್ಣನ್ನು ತೊಳೆದುಬಿಟ್ಟರೆ ಅದು ಎಳೆದು ಬಿಡುತ್ತದೆ. ಮನಸ್ಸಿಗೆ ಮೆತ್ತಿಕೊಂಡಿರುವ ಕಾಮ-ಕಾಂಚನಗಳೆಂಬ ಮಣ್ಣನ್ನು ತೊಳೆಯಬೇಕು.

☛ ಕೇವಲ ಓದುವುದರಿಂದಲೇ ಆಗಲಿ ಅಥವಾ ಕೇಳುವುದರಿಂದಲೇ ಆಗಲಿ ಏನು ಪ್ರಯೋಜನ? ಕೆಲವರು ಹಾಲಿನ ವಿಷಯವಾಗಿ ಕೇಳಿದ್ದಾರೆ, ಇನ್ನು ಕೆಲವರು ಅದನ್ನು ನೋಡಿದ್ದಾರೆ, ಮತ್ತೆ ಕೆಲವರು ಅದನ್ನು ಕುಡಿದಿದ್ದಾರೆ. ಭಗವಂತನನ್ನು ನಿಜವಾಗಿ ದರ್ಶನ ಮಾಡಬಹುದು. ಅಷ್ಟೇ ಏಕೆ ಆತನೊಡನೆ ಮಾತುಕತೆಯನ್ನೂ ಆಡಬಹುದು.

☛ ಜನ ಸುಮ್ಮನೆ 'ಧರ್ಮ-ಧರ್ಮ' ಅನ್ನುತ್ತಲೇ ಇರುತ್ತಾರೆ. ಆದರೆ ಇವರೊಡನೆಯೂ ಜಗಳ ಕಾಯುತ್ತಾರೆ, ಅವರೊಡನೆಯೂ ಜಗಳ ಕಾಯುತ್ತಾರೆ. ಹಿಂದೂ, ಮುಸಲ್ಮಾನ, ಬ್ರಾಹ್ಮಸಮಾಜ, ಶಾಕ್ತ, ವೈಷ್ಣವ, ಶೈವ ಸಂಪ್ರದಾಯದವರೆಲ್ಲರೂ ಪರಸ್ಪರ ಜಗಳ ಕಾಯುತ್ತಲೇ ಇರುತ್ತಾರೆ... ಧರ್ಮದ ಹೆಸರಿನಲ್ಲಿ ಹೊಡೆದಾಟ, ಬಡಿದಾಟ, ಕಿತ್ತಾಟ ಇದೆಲ್ಲ ಒಳ್ಳೆಯದಲ್ಲ. ಎಲ್ಲರೂ ಭಗವಂತನ ಕಡೆಗೇ ಹೋಗುತ್ತಿದ್ದಾರೆ.

☛ ತಂದೆ ತಾಯಿಗಳು ಕಸಕಡ್ಡಿಗಳೇ? ಅವರು ಸುಪ್ರೀತರಾದ ಹೊರತು ಸಾಧನ ಕರ್ಮಗಳಾವುವೂ ಫಲ ಬಿಡದು.

☛ ನನ್ನ ಕಣ್ಣಿಗೆ ಬೀಳುವ ಸ್ತ್ರೀಯರೆಲ್ಲರೂ ಭಗವತಿಯರೇ. ಅದಕ್ಕಾಗಿಯೇ ನಾನು ಬೃಂದೆಗೆ (ದೇವಸ್ಥಾನದ ಕಸಗುಡಿಸುವ ಹೆಂಗಸು) ಒಂದು ಬೈಗಳನ್ನೂ ಬಯ್ಯಲಾರೆ. ಕೆಲವರು ಶ್ಲೋಕಗಳನ್ನು, ಚಂಡೀ(ದೇವೀ ಮಾಹಾತ್ಮ್ಯೆ)ಯನ್ನು ನೀರು ಕುಡಿದ ಹಾಗೆ ಹೇಳಬಲ್ಲರು ಮತ್ತು ಗಹನ ವಿಷಯಗಳನ್ನು ನಿರರ್ಗಳವಾಗಿ ಮಾತನಾಡಬಲ್ಲರು. ಆದರೆ ವ್ಯವಹಾರದಲ್ಲಿ ಮಾತ್ರ ಅವರ ರೀತಿಯೇ ಬೇರೆ.

☛ ಯಾರು ಸತತ ಭಗವಂತನ ಧ್ಯಾನದಲ್ಲಿಯೇ ನಿರತನಾಗಿದ್ದಾನೋ ಆತನಿಗೆ ಗೊತ್ತಾಗುತ್ತದೆ, ಭಗವಂತನ ಸ್ವರೂಪ ಎಂಥದು ಎಂಬುದು. ಕೇವಲ ಆ ವ್ಯಕ್ತಿಗೆ ಮಾತ್ರವೇ ಗೊತ್ತಿರುತ್ತದೆ, ಭಗವಂತನು ನಾನಾ ರೂಪುಗಳಿಂದ ನಾನಾ ಭಾವಗಳಿಂದ ತೋರ್ಪಡಿಸಿಕೊಳ್ಳುತ್ತಾನೆ ಮತ್ತು ಆತ ಸಗುಣನೂ ಹೌದು, ನಿರ್ಗುಣನೂ ಹೌದು ಎಂಬುದು.

☛ ಜ್ಞಾನ ಭಕ್ತಿ ಎರಡೂ ಮಾರ್ಗಗಳೇ. ಯಾವ ಮಾರ್ಗದಿಂದ ಹೋದರೂ ಭಗವಂತನನ್ನು ಪಡೆಯಬಹುದು. ಭಗವಂತನನ್ನು ಜ್ಞಾನಿ ಒಂದು ದೃಷ್ಟಿಯಿಂದ ನೋಡುತ್ತಾನೆ. ಭಕ್ತ ಇನ್ನೊಂದು ದೃಷ್ಟಿಯಿಂದ ನೋಡುತ್ತಾನೆ. ಜ್ಞಾನಿಯ ಭಗವಂತ ತೇಜೋಮಯ, ಭಕ್ತನ ಭಗವಂತ ರಸಮಯ.



—ಶ್ರೀರಾಮಕೃಷ್ಣ ಪರಮಹಂಸರು